ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ಸುಂದರಕ್ಕಿಂತ ಅತಿ ಸುಂದರ ಯಾವುದು?



ಚುಮುಚುಮು ಚಳಿಯಲ್ಲಿನ ಬೆಚ್ಚನೆಯ ಸೂರ್ಯೋದಯ.

ಈರಣ್ಣ ಐ. ದಮಡಿ, ಹಳ್ಳದಕೇರಿ
ಪರಿಸರ, ಮನಸ್ಸು, ಆಹಾರ ಇತ್ಯಾದಿ ಯಾವುದೂ ಶುದ್ಧವಾಗಿಲ್ಲ. ಶುದ್ಧವಾಗಿರುವುದು ಯಾವುದು?
ಇವೆಲ್ಲ ಶುದ್ಧವಾಗಿಲ್ಲವೆಂಬ ಅರಿವು ಶುದ್ಧವಾಗಿದೆಯಲ್ಲ; ಅದೊಂದಿದ್ದರೆ ಇಂದಲ್ಲ ನಾಳೆ ಶುದ್ಧತೆ ಮರಳೀತು.

ಕೆ.ಎಂ. ವಿಭೂತಿ, ಹರಿಹರ
ಹನಿಟ್ರ್ಯಾಪ್‌ಗೂ, ಹನಿಮೂನ್‌ಗೂ ವ್ಯತ್ಯಾಸವೇನು ಗುರುವೆ?
ಹನಿಟ್ರ್ಯಾಪ್ ಕಾಮದ Billಉ. ಹನಿಮೂನ್ ಕಾಮನಬಿಲ್ಲು.

ನರಸಿಂಹ ಪೈ, ಕಾಸರಕೋಡ
ಶುಕ್ರದೆಸೆಗೂ, ಶನಿದೆಸೆಗೂ ಏನು ವ್ಯತ್ಯಾಸ?



ಶನಿ ಕಾರಣ, ಶುಕ್ರ ಫಲ. ಶನಿದೆಸೆ ಇದೆಯೆಂದು ಮೂಢನಲ್ಲಿ ಭೀತಿ ಹುಟ್ಟಿಸಿದರೆ ಜ್ಯೋತಿಷಿಗೆ ಶುಕ್ರದೆಸೆ.

ರತ್ನಾ ಅಶೋಕ ಗೊರವರ, ಧಾರವಾಡ
ಊರಿಗೆ ಬಂದವಳು ನೀರಿಗೆ ಬರುತ್ತಾಳೆ ಸರಿ. ಊರಿಗೆ ಬಂದವನು?
ನೀರಿಗೆ ಬಂದವರನ್ನೆಲ್ಲ ನೋಡಲು ದಂಡೆಗೆ ಬರುತ್ತಾನೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ರಾಜಕಾರಣಿಗಳಿಗೆ ಘಂಟೆ ಕಟ್ಟಬಹುದೆ ಸಾರ್?
ಬೇಡ ಪ್ಲೀಸ್. ಹಾಗೇನಾದರೂ ಕಟ್ಟಿದರೆ ಘಂಟೆ ಢಣ್ ಢಣ್ ಎನ್ನುವ ಬದಲು ಲಾವ್ ಲಾವ್ ಎನ್ನತೊಡಗುತ್ತದೆ.

ಬಾ.ರಂ. ಸುರೇಶ್, ಶಿವಮೊಗ್ಗ
ಒಬ್ಬ ಗಂಡಸಿನ ಹಿಂದೆ– ಮುಂದೆ ಹೆಣ್ಣಿನ ಅವಶ್ಯಕತೆ ಇದೆ ಎನ್ನುತ್ತಾರೆ. ಇದರ ರಹಸ್ಯವೇನು?
‘ಬೆನ್ನು ಕಾಯಲು ತಾಯಿ, ಸಂಸಾರ ಮುಂದುವರಿಸಲು ಹೆಂಡತಿ’ ಎಂದು.

ಮಹಾವೀರ ಕಾಸರ, ಶಿವಮೊಗ್ಗ
ನೋಟು ಕೊಟ್ಟು ವೋಟು ಪಡೆದವರಿಂದ ಸ್ವಚ್ಛ ಆಡಳಿತ ನಿರೀಕ್ಷಿಸಬಹುದೆ?
ನೋಟು ಪಡೆದು ವೋಟು ಹಾಕಿದವರಂತೂ ನಿರೀಕ್ಷಿಸುವಂತಿಲ್ಲ.

ಆರ್. ಮಧುಸೂದನ್, ಹಾಸನ
ಮದುವೆ ಆದಮೇಲೂ ಕಾಡುವ ಒಂಟಿತನಕ್ಕೆ ಏನು ಮದ್ದು ಗುರುವರ್ಯಾ?
ಎಂತಹ ಅನುರೂಪ ಜೋಡಿ ಸರ್ ನಿಮ್ಮದು! ನಿಮ್ಮ ಶ್ರೀಮತಿಯೂ ಇದೇ ಪ್ರಶ್ನೆ ಕೇಳಿದ್ದಾರೆ!

ಹರಿತಸ, ಬೆಂಗಳೂರು
ಪ್ರಶಸ್ತಿ ಹೊಡಕೊಂಡು ಬರುವುದಕ್ಕೂ, ಪಡೆದುಕೊಂಡು ಬರುವುದಕ್ಕೂ ವ್ಯತ್ಯಾಸವೇನು ರಾಮ್‌ಜೀ?
ಇದು ಬೆರಗು; ಅದು ಮೆರುಗು.

ವಿ.ಎಸ್. ಹಿಂದೂಪುರ, ಬಳ್ಳಾರಿ
ಕೊಲ್ಲುವ ಪಾಪ ಮರಣದಂಡನೆ ವಿಧಿಸಿದವರಿಗೋ, ಗಲ್ಲಿಗೇರಿಸಿದವರಿಗೋ?
ಅದು ದುಷ್ಟಸಂಹಾರವಾದ್ದರಿಂದ ಪಾಪದ ಅಕೌಂಟ್ ಓಪನ್ ಆಗದಂತೆ.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
ದೇವತೆಗಳು, ಋಷಿಮುನಿಗಳಿಗಿದ್ದ ಸಂಸಾರ, ಐಭೋಗಗಳು ಮಠಾಧಿಪತಿಗಳಿಗೆ ಏಕಿಲ್ಲ?
ಮಠಾಧಿಪತಿಗೆ ಸಂಸಾರವಿದ್ದರೆ ಮಠದ ಪೀಠಕ್ಕೂ ವಂಶಪಾರಂಪರ್ಯ ತಗುಲೀತೆಂಬ ಭೀತಿ.

ಎಂ.ಎ. ಕುಮಾರ್, ಬೆಂಗಳೂರು
ಹೆಗಲ ಮೇಲೆ ಕೈ ಹಾಕುತ್ತಿದ್ದವರೇ ಸಾವಿಗೆ ಹೆಗಲು ಕೊಡಲು ಹಿಂಜರಿಯುವುದೇಕೆ?
‘ಸತ್ತಮೇಲೂ ಸ್ನೇಹ ತೋರಿದ ನಿನ್ನಲ್ಲೇ ಸೇರುತ್ತೇನೆ’ ಎನ್ನುತ್ತಾ ಭೂತವಾಗಿ ಸೇರಿಬಿಟ್ಟಾನೆಂಬ ಭಯ!

## ಬಹುಮಾನಿತ ಪ್ರಶ್ನೆ

ಸಿ.ಬಿ. ಕಿಣಿ, ಹೊಸದುರ್ಗ
ಶ್ರೀಮಂತಿಕೆಯಿಂದ ನೆಮ್ಮದಿ ಇಲ್ಲ ಎಂದು ಗೊತ್ತಿದ್ದರೂ ಮನುಷ್ಯ ಶ್ರೀಮಂತನಾಗಲು ಹವಣಿಸುವುದೇಕೆ?
ಅನಿವಾರ್ಯ ಉಪವಾಸದಿಂದ ಅವಶ್ಯಕ ಡಯಟಿಂಗ್‌ನತ್ತ ಸಾಗುವ ಬಯಕೆಯಂತೆ.

ಗಣೇಶ ಎಂ. ಪೈ, ಬೆಂಗಳೂರು
ಒಟ್ಟಿಗೆ ಕಾಫಿಗೆ ಹೋದಾಗ ತಾವೇ ಬಿಲ್ ತೆತ್ತು ತಿಂಡಿಗೆ ಹೋದಾಗ ‘ನೀವೇ ಕೊಡಿ’ ಎನ್ನುವ ಸಹೋದ್ಯೋಗಿಯಿಂದ ಬಿಡುಗಡೆ ಹೇಗೆ?
ಬರಿಸ್ತಾದಲ್ಲಿ ಕೋಲ್ಡ್ ಕಾಫಿ ತೆಗೆದುಕೊಳ್ಳಿ. ಬಿಲ್ ನೀಡಲಾಗದೆ ತಾವೇ ಜೊತೆ ಬರುವುದನ್ನು ನಿಲ್ಲಿಸುತ್ತಾರೆ.

ಆರ್. ಸುನೀಲ್ ತರೀಕೆರೆ
ಪರರ ನೋವಿಗಾಗಿ ಅಳುವವರನ್ನು ‘ಹೆಂಗರುಳು’ ಎನ್ನುವರು. ವೋಟಿಗಾಗಿ ಅಳುವ ರಾಜಕಾರಣಿಯನ್ನು ಏನೆಂದು ಕರೆಯಬೇಕು?
ಏನೆಂದೂ ಕರೆಯಬೇಕಾಗಿಲ್ಲ. ಮತದ ಮೂಳೆಗಾಗಿ ತಾನೇ ಬಾಲ ಆಡಿಸಿಕೊಂಡು ಬರುವ ಪ್ರಾಣಿಯದು.

ಪಿ.ಜಿ. ರಾಜ್, ಶಿವಮೊಗ್ಗ
ವಿರಹಕ್ಕೂ, ವಿದಾಯಕ್ಕೂ ಇರುವ ವ್ಯತ್ಯಾಸವೇನು?



ವಿರಹ ಕಾಮ, ವಿದಾಯ ಫುಲ್‌ಸ್ಟಾಪ್.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಕ್ರಿಕೆಟ್ ಆಟದಲ್ಲಿರುವಂತೆ ನಿಜ ಜೀವನದಲ್ಲಿಯೂ ಎರಡನೇ ಇನಿಂಗ್ಸ್ ಇದ್ದಿದ್ದರೆ...?
ಇದೆಯಲ್ಲ! 60ರ ನಂತರ ಅದೇ ಪ್ರಭವ, ವಿಭವ, ಶುಕ್ಲ...

ಅರವಿಂದ ಜಿ. ಜೋಷಿ, ಮೈಸೂರು
ಕಣ್ಣೀರಿನ ಫಲ ಠುಸ್ ಎಂದು ಅರಿತೂ ಮತ್ತದೇ ಅಸ್ತ್ರ ಬಳಸುವ ರಾಜಕಾರಣಿಗೆ ಏನೆನ್ನಬೇಕು?
ಛೆ! ಇದು ‘ವಿಕ್ಸ್‌ಅಶ್ರುವಲ್ಲ’ ಮುಂದಿನ ಚುನಾವಣೆಯ ಹೊತ್ತಿಗೆ ನಿಜ ಅಳು ಅಳಲು ನಡೆಸಿರುವ ತಾಲೀಮಂತೆ.

■ ರಾಮ್